ಕಥೆ

# ಅಪವಾದ

■ ಎಫ್.ಎಂ. ನಂದಗಾವ್

"ನೀ ಹೋಗೂದಿದ್ರ ಹೋಗಿ ಬಾ.''

ಅವರು, ದೀರ್ಘವಾಗಿ ಉಸಿರು ಎಳೆದುಕೊಂಡು ನಿಧಾನವಾಗಿ ಸ್ಪಷ್ಟವಾದ ಧ್ವನಿಯಲ್ಲಿ ಹೇಳುತ್ತಿದ್ದರು.

'ನಾ ಬರೂದಿಲ್ಲ' ಎಂದು ಖಂಡತುಂಡವಾಗಿ ಕಡ್ಡಿ ಮುರಿದು ಕೈಗೆ ಕೊಟ್ಟಂತೆ ಮಾತನಾಡಿದ ಅವರು, ತಮ್ಮ ನಿಲುವನ್ನು ತಿಳಿಸಿದರು.

"ಹಂಗೆಂಗ ಆಗ್ತದ'' ನಾ ಕೇಳಿದೆ.

"ಇಲ್ಲ, ಇದು ಹಂಗ ಆಗ್ತದ'' ಎಂದ ಅವರು, ಬೆಣ್ಣೆಯಲ್ಲಿನ ಕೂದಲು ತೆಗೆದು ಕೈಗೆ ಕೊಟ್ಟವರಂತೆ ಮಾಡಿದರು.

"ಮತ್ತ... ನಿನಗ ಹೋಗಬೇಕ ಅನಿಸಿದರ ಹೋಗು. ನಿನ್ನ ಕಣ್ಣಾಗ, ನಾ ಏನು ಅನ್ನೂದು ಗೊತ್ತಾಗ್ತದ. ನಿನಗ ನನಗಿಂತ ಅವರ ಹೆಚ್ಚ ಅನ್ನಂಗಿದ್ದರ ಹೋಗಿ ಬಾ''.

ಇಷ್ಟು ನುಡಿದವರೇ ಅವರು, ನನ್ನ ಮುಖವನ್ನು ನೋಡದೇ, ನೇರವಾಗಿ ಕಣ್ಣಲ್ಲಿ ಕಣ್ಣಿಟ್ಟು ಮಾತನಾಡದೇ ಬಾಗಿಲು ಕದ ತಗದು, ಮೆಟ್ಟ ಮೆಟ್ಕೊಂಡ ಹೊರಟೇ ಹೋದರು.

ಅವರ ಮಾತು ಅಂದ್ರ ಮಾತು. ಶಿಲಾಶಾಸನ ಇದ್ದಂಗ. ಅದನ್ನ ಅಳಸೂ ಹಂಗ ಇಲ್ಲ ನಮ್ಮ ಮನ್ಯಾಗ.

ಅದು, ಸಂಜೆ 8.30ರ ಸಮಯ. ಮನೆಯವರೆಲ್ಲಾ ಕೂತು ದೇವರಿಗೆ ದಿನದ ಕೊಡುಗೆಗಳಿಗಾಗಿ ಕೃತಜ್ಞತೆ ಸಲ್ಲಿಸುವ ಸಮಯ. ಮಾತೆ ಮರಿಯಳ– ಸಾಯಬಾಂಚಿ– ಮನವಿ ಮಾಲೆ ಹೇಳುವ ಸಮಯ.

'ಕೂತು ಉಂಡರೆ ಕುಡಿಕೆ ಹೊನ್ನು ಸಾಲದು' ಅನ್ನು ಮಾತದ. ಆದರ, ನಮ್ಮಲ್ಲಿ 'ಯಾವ ಕುಟುಂಬವು ಕೂಡಿಕೊಂಡು ಪ್ರಾರ್ಥನೆ ಸಲ್ಲಿಸುವುದೋ ಆ ಕುಟುಂಬ ಸದಾ ಕಾಲ ಕೂಡಿ ಇರ್ತದ' ಅಂತ ಒಂದ ಹೇಳಿಕಿ ಅದ. ನನಗ ತಿಳಿವಳಿಕೆ ಬಂದಾಗಿನಿಂದಲೂ, ಗುಡಿಯ ಸ್ವಾಮಿಗಳ ಈ ಮಾತು ಸದಾ ಕಿವಿಯಲ್ಲಿ ಗುಂಯಗುಡ್ತಾನ ಇರ್ತಾವ. ಆಗಾಗ ಪುನರಾವರ್ತನೆ ಆಗುವ ಈ ಮಾತುಗಳು ನನ್ನ ಮನದ ಮೂಲೆಯಲ್ಲಿ ಸದಾ ಜಾಗೃತವಾಗಿರ್ತಾವ.

ಕುಟುಂಬಗಳ ಕೂಡು ಬಾಳುವಿಕೆಗೆ ಕಾರಣವಾಗುವ, ಸಾಮಾನ್ಯವಾಗಿ ಎಂದೂ ತಪ್ಪದ ವ್ರತದಂತೆ ನಡೆಯುವ ಈ ಸಂಜೆ ಪ್ರಾರ್ಥನೆಯಿಂದ ಮನೆಯ ಹಿರಿಯ ಹೊರಗೆ ಉಳಿಯುವುದು ಎಂದರೆ ಏನು?

ಸಾಲಿಯಿಂದ ಬಂದ ತಕ್ಷಣ ಪಾಟಿಚೀಲ ಮೂಲಿಗೆ ಒಗೆದು, ಹೊರಗೆ ಓಡಿ ಆಟಾ ಆಡಿ ದಣಿದು ಬಂದ ಇಬ್ಬರು ಚಿಕ್ಕಮಕ್ಕಳು, ಮನೆ ಪಾಠದ ಕೆಲಸ ಮುಗಿಸಿ ಹಸಿದು ಕುಳಿತಿದ್ದರು. 'ಯಾವಾಗ ಸಂಜೆ ಪ್ರಾರ್ಥನೆ ಮುಗಿಯುವುದೋ? ಯಾವಾಗ ಊಟ ಮಾಡಿ ಮಲಗುವೆವೋ?' ಎಂಬ ಚಿಂತೆಯಲ್ಲಿ ಮುಳುಗಿದ್ದೆವು.

ಪಡಸಾಲೆಯಲ್ಲಿ ನಡೆಯುತ್ತಿದ್ದ ಈ ರಂಪಾಟವನ್ನು ತನ್ನ ಕೋಣೆಯಲ್ಲಿ ಕುಳಿತು ಕೇಳುತ್ತಿದ್ದ ವೈನಿ, ಇದು, ಇದ್ದದ್ದೇ ಎಂಬ ಭಾವದಲ್ಲಿ ಹೊರಗೆ ಬಂದು ಪೀಠದಲ್ಲಿ ದೀಪ ಹಚ್ಚುವುದಕ್ಕೆ ಮುಂದಾದರು. ಮೂರು ಸಂಜೆಗೆ ಧೂಪ ಹಾಕುವುದು, ರಾತ್ರಿ ಕುಟುಂಬ ಪೂಜೆಗೆ ಪೀಠದಲ್ಲಿ ದೀಪ ಬೆಳಗುವುದು ಅವಳ ಕೆಲಸ.

ಹೊತ್ತು ಮುಳುಗಿ ಮೂರ‍್ನಾಲ್ಕು ತಾಸು ಕಳೆದ ಹೊತ್ತಿನಲ್ಲಿ ಅವರು ಹೊರಗೆ ಹೋಗುವುದು ಎಂದರೆ ನಮಗೆಲ್ಲಾ ಪುಕುಪುಕು ಶುರುವಾಗ್ತದೆ. ಉಳಿದ ಸಮಯವಾದರೆ ಅದು ಬೇರೆಯ ತರಹ. ಆದರಿದು ಗಣೇಶ ಹಬ್ಬದ ಸಮಯ. ಅವರ ಚಡ್ಡಿ ದೋಸ್ತರು ಸಿಕ್ಕರೆ, ಅವರು ಮನಿ ದಾರಿ ತೋರಿಸುವುದು ಅಷ್ಟರಲ್ಲೇ ಇರ್ತದ.

ದೂರದಲ್ಲಿ ಓಣಿಯ ಮೂಲೆಯಲ್ಲಿ ಪೆಂಡಾಲೊಳಗ ಗಣಪ್ಪನ್ನ ಕೂಡಿಸಿತ್ತು.

***

'ಹೆಡ್ ಆಫ್ ದ ಫ್ಯಾಮಿಲಿ, ಹಾರ್ಟ್ ಆಫ್ ದ ಫ್ಯಾಮಿಲಿ'.

ಹೆಡ್ ಆಫ್ ದ ಫ್ಯಾಮಿಲಿ ಅಂದ್ರೆ, ಮನೆ ಯಜಮಾನ. ಹಾರ್ಟ್ ಆಫ್ ದ ಫ್ಯಾಮಿಲಿ ಅಂದ್ರೆ, ಮನೆಯ ಹೃದಯ. ಮನೆಯ ಯಜಮಾನ ಮನೆಯ ಹೃದಯ ಇದ್ದಂಗ ಅನ್ನೂದು ಈ ಮಾತಿನ ತಾತ್ಪರ್ಯ. ಇವತ್ತ ಈ ಮನೆ ಯಜಮಾನ ಅಂದ್ರ ಯಾರು? ನನ ಗಂಡ. ಜಮಾನಗಳಿಂದ ಇದನ್ನ ನಮ್ಮವ್ವ, ನಮ್ಮಜ್ಜಿ, ಅವರಜ್ಜಿ ಹೇಳಕೋತ ಬಂದಾರ.

ನನ್ನ ಮನೆ ಯಜಮಾನರು, ಈ ಮನೆಯ ಹೃದಯದಂಗ ಇರಾವರು, ಈಗ ನಾ ಹೋಗುದಕ್ಕ ತಕರಾರ ತಗದ ಕುಂತಾರ. ತಾಯಿ ಇರೂತನಕ ತವರ ಮನಿ ಅಂತಾರ. ನಮ್ಮವ್ವ ತೀರಕೊಂಡ ಬಾಳ ವರ್ಷಗಳ ಕಳದಾವು. ಈಗ ಇರಾಕಿ ಒಬ್ಬ ಚಿಗವ್ವ ಒಬ್ಬಳ.

ಇವರು ಹೊರಗ ಹೋಗಿ ಸುಮಾರ ಹೊತ್ತ ಆಗಿತ್ತು. ನಾವು ಊಟಕ್ಕ ಎದ್ದಿದ್ವಿ. ಅದ ವ್ಯಾಳೇಕ,

